<u>**೨ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**</u>

<u>**ಸಿ.ಸಿ. ಸಂಖ್ಯೆ:4715/2022**</u>

ಫಿರ್ಯಾದಿ : ಹೇಮಂತ್ ಕುಮಾರ್ ಎಸ್ ಬಿನ್ ಶಿವಕುಮಾರ್ ಎಸ್.,31 ವರ್ಷ,
ಮನೆ ನಂ:3476, ನಾಗೇಶ್ವರನ್ ಲೇಔಟ್, 16 ನೇ ಕ್ರಾಸ್,
ನಂಜನಗೂಡು ಟೌನ್..

ವಿರುದ್ಧ

ಆರೋಪಿ : ಗಣೇಶ ಎಲ್ ಎನ್ ಬಿನ್ ಲೇ:ನಾಗೇಂದ್ರರಾವ್, 35 ವರ್ಷ,
ಮನೆ ನಂ:3691, 20 ನೇ ಕ್ರಾಸ್ ಎಕ್ಸ್ ಟೇಷನ್,
ಆರ್ ಪಿ ರಸ್ತೆ, ನಂಜನಗೂಡು ಟೌನ್..

: ಆರೋಪಣೆ :

ಶ್ರೀಮತಿ ಶಶಿಕಲಾ ಜಿ, ಬಿ.ಎ, ಎಲ್‌ಎಲ್‌ಬಿ ೨ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಗೃಹಕೃತ್ಯದ ಖರ್ಚಿಗಾಗಿ ಹಾಗೂ ಇತರೆ ವ್ಯವಹಾರಕ್ಕಾಗಿ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರಿಂದ ದಿ:09.06.2021 ರಂದು ಭೇಟಿ ಮಾಡಿ ರೂ.4,50,000/-ಗಳನ್ನು ಮುಬ್ಬೆ ಸಾಲವಾಗಿ ಪಡೆದುಕೊಂಡಿರುತ್ತೀರಿ. ಸದರಿ ಮೊಬಲಗನ್ನು ಆರೋಪಿಯಾದ ನೀವು ಒಂದು ತಿಂಗಳೊಳಗಾಗಿ ವಾಪಸ್ಸು ಕೊಡುವುದಾಗಿ ಒಪ್ಪಿರುತ್ತೀರಿ, ಸದರಿ ಮೊಬಲಗಿನ ಮರುಪಾವತಿಗಾಗಿ ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆಯಿರುವ ದಿ ಕ್ಯಾಥೋಲಿಕ್ ಸೇರಿಯಾನ್ ಬ್ಯಾಂಕ್ ಲಿಮಿಟೆಡ್, ನಂಜನಗೂಡು ಶಾಖೆಯ ಚೆಕ್ ನಂ:100048 ಗೆ ರೂ.4,50,000/- ಗಳನ್ನು ದಿನಾಂಕ:04.04.2022 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚೆಕ್ಕುಗಳನ್ನು ನಗದೀಕರಿಸಿಕೊಳ್ಳಲು ಉಳಿತಾಯ ಖಾತೆಯಿರುವ ದಿ ಕರ್ನಾಟಕ ಬ್ಯಾಂಕ್ ಲಿ., ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ

L.N Ganesh

[signature]

2/12/23

ಹಿಂಬರಹದೊಂದಿಗೆ ದಿ:06.04.2022 ರಂದು ನಗದೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.18.04.2022 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಯಾದ ನಿಮಗೆ ಜಾರಿಯಾಗದೇ **"Left without instructions and unclaimed"** ಎಂಬ ಷರಾದೊಂದಿಗೆ ವಾಪಸ್ಸಾಗಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?

ಉತ್ತರ : ಹೌದು

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

ಉತ್ತರ : ತಪ್ಪು ಮಾಡಿಲ್ಲ. ವಿಚಾರಣೆಯಾಗಬೇಕು

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 20.02.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).

L.N Yogesh

ಸಹಿ/- 20/2/23

2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು